ಮೂಲ ದಾವಾ : 120-2016 ಪಿಡಬ್ಲ್ಯು-3

ಸಾಕ್ಷಿಯನ್ನು ದಿನಾಂಕಃ 05.10.2018 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು : ಶ್ರೀ ಎಸ್ ಟಿ ಟಿ ವಕೀಲರಿಂದ

ದಾವಾ ಆಸ್ತಿಯು ಶೇತ್ಕಿ ಜಮೀನು ಅಂದರೆ ಸರಿ. ದಾವಾ ಆಸ್ತಿಯ ಸರ್ವೆ ನಂಬರ್ ಹೇಳಲು ಬರುವುದಿಲ್ಲ. ಸದರಿ ಆಸ್ತಿಯ ಪಂಚಾಯಿತಿ ನಂಬರ್ ಸಹ ಹೇಳಲು ಬರುವುದಿಲ್ಲ. ದಾವಾ ಆಸ್ತಿಯು ಮೂಲತಃ 1ನೇ ಪ್ರತಿವಾದಿಯ ಗಂಡನಿಗೆ ಸೇರಿತ್ತು ಅಂದರೆ ಸರಿ ಆದರೆ ಅದನ್ನು ಈಗ 1ನೇ ವಾದಿಯು ಖರೀದಿಗೆ ಹಿಡಿದುಕೊಂಡಿದ್ದಾರೆ. ದಾವಾ ಆಸ್ತಿಯು ವ್ಯವಸಾಯೇತರ ಉದ್ದೇಶಕ್ಕೆ ಪರಿವರ್ತನೆಗೊಂಡಿದೆ ಇಲ್ಲವೋ ಅಂದರೆ ಗೊತ್ತಿಲ್ಲ. ಪಂಚಾಯಿತಿ ನಂಬರ್ ಕೊಡಬೇಕಾದರೆ ಬಿನ್ ಶೇತ್ಕಿ ಆಗಿರಬೇಕೆಂದರೆ ಗೊತ್ತಿಲ್ಲ. ದಾವಾ ಆಸ್ತಿಯ ದಾಖಲೆಗಳನ್ನು ನೋಡಿಲ್ಲ. ದಾವಾ ಆಸ್ತಿಯ ಶೇತ್ಕಿ ಜಮೀನು ಅಂದರೆ ಗೊತ್ತಿಲ್ಲ. ದಾವಾ ಆಸ್ತಿಯು ಶೇತ್ಕಿ ಜಮೀನು ಆಗಿರುವುದರಿಂದ ಪಂಚಾಯಿತಿಯಲ್ಲಿ ದಾಖಲೆ ಮಾಡಲು ಬರುವುದಿಲ್ಲ ಅಂದರೆ ಗೊತ್ತಿಲ್ಲ.

ವಾದಿಗೆ ಖರೀದಿಗೆ ಕೊಟ್ಟ ಪತ್ರಕ್ಕೆ ನಾನು ಸಹಿ ಮಾಡಿಲ್ಲ ಆದರೆ ವ್ಯವಹಾರದಲ್ಲಿ ಭಾಗಿಯೂಗಿದ್ದೆ. ಪ್ರತಿವಾದಿ 1 ರವರ ಗಂಡ ಯಾವುದೇ ಖರೀದಿ ವ್ಯವಹಾರ ಪತ್ರವನ್ನು ಬರೆದುಕೊಡದ ಕಾರಣ ನಾನು ಸಹಿ ಮಾಡಿಲ್ಲ ಅಂದರೆ ಸರಿಯಲ್ಲ. ಖರೀದಿ ವ್ಯವಹಾರ ಆದ ದಿನಾಂಕ ಗೊತ್ತಿಲ್ಲ. ಸಾಕ್ಷಿಯ ಮುಂದುವರೆದು ಸುಮಾರು 10-11 ವರ್ಷಗಳ ಹಿಂದೆ ಆಗಿರಬಹುದು ಅಂತ ನುಡಿಯುತ್ತಾರೆ. ಸದರಿ ದಾಖಲೆ ನೊಂದಾವಣೆಯಾಗಿದೆಯೋ ಇಲ್ಲವೋ ಗೊತ್ತಿಲ್ಲ. ವಾದಿಯು ನನ್ನ ಸ್ನೇಹಿತನಿರುವ ಕಾರಣ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೇ ಸರಿಯಲ್ಲ. ವಾದಿ ಮತ್ತು ಪ್ರತಿವಾದಿ 1 ರವರ ಗಂಡರವರ ನಡುವೆ ಯಾವುದೇ ಖರೀದಿ ವ್ಯವಹಾರ ಇಲ್ಲದಿದ್ದರು ವಾದಿಯ ಮಾತು ಕೇಳಿ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಗೊತ್ತಿಲ್ಲ. ಸಿದ್ದಪ್ಪ ಹುಲಗೂರ ರವರು ತೀರಿಕೊಂಡ ನಂತರ ಅವರ ಹೆಂಡತಿ ಮಕ್ಕಳು ವಾರ್ಸ ಆಗುತ್ತಾರೆ ಅಂದರೆ ಸರಿ. ಆ ಪ್ರಕಾರ ಪ್ರತಿವಾದಿಯರು ಸಿದ್ದಪ್ಪನ ಆಸ್ತಿಗೆ ಹೆಸರು ಹಚ್ಚಿಕೊಂಡಿದ್ದಾರೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಷೆಡ್ಡು ಹಾಕಿದ್ದಾರೆ ಅಂದರೆ ಗೊತ್ತಿಲ್ಲ. ಆದರೆ ಮಹದೇವಪ್ಪನೇ ಸದರಿ ಆಸ್ತಿಯಲ್ಲಿ ಹುಲ್ಲಿನ ಬಣವೆ ಹಾಕಿಕೊಂಡಿದ್ದರು ಅಂತ ನುಡಿಯುತ್ತಾರೆ. ದಾವಾ ಆಸ್ತಿಯ ಬಳಿ ನನಗೆ ಯಾವುದೇ ಆಸ್ತಿ ಇಲ್ಲ. ಹಾಗಾಗಿ ನನಗೆ ದಾವಾ ಆಸ್ತಿಯ ಬಳಿ ಹೋಗುವ ಪ್ರಸಂಗ ಇಲ್ಲ ಅಂದರೆ ಸರಿಯಲ್ಲ. ಈಗ್ಗೆ 10-11 ವರ್ಷಗಳ ಹಿಂದೆ ದಾವಾ ಆಸ್ತಿಯ ಬಳಿ ಹೋಗಿದ್ದೆ. ಇತ್ತೀಚೆಗೆ ನಾನು ದಾವಾ ಆಸ್ತಿಯ ಕಡೆ ಹೋಗಿಲ್ಲ. ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ವಿಚಾರದ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇಲ್ಲ ಕಾರಣ ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ವಾದಿಯ ಪರ ಸಾಕ್ಷ್ಯ ನುಡಿಯಲು ಬಂದಿದ್ದೇನೆ ಅಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ